4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿ.ಸಿ ನಂ- 20912/2013

ಚಾ.ಸಾ.- 4 ಅ.ಸಾ.- 3

ಪ್ರ.ವ.ಬೊ. ದಿಃ 25.11.2019

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಮಾಲೀನಿ ಚಿದಾನಂದ |
| ತಂದೆಯ ಹೆಸರು | ಃ | ಚಿದಾನಂದ ಪಿಸಿ |
| ವಯಸ್ಸು | ಃ | 47 ವರ್ಷ |
| ಕೆಲಸ | ಃ | ಬ್ರ್ಯಾಂಚ್ ಮ್ಯಾನೇಜರ್ ಎಸ್‌ಬಿಐ |
| ವಾಸ | ಃ | ಬೆಂಗಳೂರು |

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ನಾನು 2011 ರಿಂದ 2015 ವರೆಗೆ ನಾನು ಬೆಂಗಳೂರಿನ ಹೊರಮಾವು ಎಸ್‌ಬಿಐ ಶಾಖೆಯಲ್ಲಿ ಸಿನಿಯರ್ ಆಸಿಸ್ಟೆಂಟ್ ಆಗಿ ಕೆಲಸ ಮಾಡಿರುತ್ತೇನೆ. ಆರೋಪಿ ಆ ಸಮಯದಲ್ಲಿ ನಮ್ಮ ಬ್ಯಾಂಕ್ ಶಾಖೆಯ ಬ್ರ್ಯಾಂಚ್ ಮ್ಯಾನೇಜರ್ ಆಗಿದ್ದರು. ಆರೋಪಿ ಎಟಿಎಂ ಬ್ಯಾಂಕ್ ಅಕೌಂಟ್ ನಿಂದ 40 ಲಕ್ಷ ಡೆಬಿಟ್ ಮಾಡಿ ಬೇರೆ ಖಾತೆಗೆ ವರ್ಗಾಯಿಸಿದ್ದಾರೆ ಎಂದು ಗೊತ್ತಾಯಿತು. ಸದರಿ ಘಟನೆ 2011 ರಲ್ಲಿ ಆಗಿತ್ತು, ಆರ್‌ಬಿಐ ರವರು ಎಟಿಎಂ ಅಕೌಂಟ್ ಚೆಕ್ ಮಾಡಿದಾಗ 40 ಲಕ್ಷ ವಿತ್‌ಡ್ರಾ ಮಾಡಿದ್ದು ತಿಳಿದುಬಂತು ಆಗ ಅವರಿಗೆ ಸಂಶಯ ಬಂದು ಅದರ ಬಗ್ಗೆ ವಿಚಾರಣೆ ಮಾಡಿದಾಗ ಆ ಸಮಯದಲ್ಲಿ ಆರೋಪಿ ಈ ರೀತಿ ಮೋಸ ನಂಬಿಕೆ ದ್ರೋಹ ಮಾಡಿದ್ದು ತಿಳಿದುಬಂತು. ಪ್ರಾಸಾ-2 ರವರು ಸದರಿ ಶಾಖೆಯಲ್ಲಿ ಕ್ಯಾಷ್ ಆಫಿಸರ್ ಆಗಿದ್ದರು. ಎಟಿಎಂ ಪಾಸ್‌ವಾರ್ಡ್ ಪ್ರತ್ಯೇಕವಾಗಿದ್ದು ಅದನ್ನು ಪ್ರಾಸಾ-2 ರವರು ಯಾರಿಗೂ ತಿಳಿಸಿರುವುದಿಲ್ಲ, ಆರೋಪಿ ಅಕೌಂಟ್ ಡೆಬಿಟ್ ಮಾಡಿದಾಗ ಕೋರ್

ಬ್ಯಾಂಕಿಂಗ್ ಪಾಸ್‌ವರ್ಡ್ ಅನ್ನು ಬಳಸಿ ಬೇರೆ ಖಾತೆಗೆ ವರ್ಗಾಯಿಸಿರುತ್ತಾರೆ. ಯಾರ ಖಾತೆಗೆ ಕ್ರೆಡಿಟ್ ಆಗಿದೆ ಎಂದು ನಂತರ ನನಗೆ ಗೊತ್ತಾಯಿತು. ಆರೋಪಿ ಆ ಹಣವನ್ನು ಆ್ತ ಖರೀದಿ ಮಾಡಲು ಉಪಯೋಗಿಸಿದ್ದಾರೆಂದು ನನಗೆ ನಂತರ ತಿಳಿದುಬಂತು. ಒಟ್ಟು ಆರೋಪಿ ಸುಮಾರು 1,30,00,000(ಒಂದು ಕೋಟಿ 30 ಲಕ್ಷ) ರೂ ರುಪಯೋಗ ಮಾಡಿರುತ್ತಾರೆ. ಆರೋಪಿ ಕರ್ತವ್ಯವನ್ನು ದುರುಪಯೋಗ ಪಡಿಸಿ ಬ್ಯಾಂಕಿಗೆ ಮೋಸ ಮಾಡಿರುತ್ತಾರೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಹಾಗೂ ನಾನು ಹೇಳಿಕೆ ಕೊಟ್ಟಿಲ್ಲ. ಆದರೆ ಆರ್‌ಬಿಐ ರವರು ವಿಚಾರಣೆ ಮಾಡಿದ್ದರು.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಹಿ.ಸ.ಸ.ಅ ರವವರು ಅನುಮತಿಕೋರಿದ್ದು, ಅನುಮತಿ ನೀಡಲಾಗಿದೆ.)

ಪಾಟೀ ಸವಾಲು ಹಿ.ಸ.ಸ.ಅ ರವರಿಂದಃ

ದಿಃ29-1-2011 ರಲ್ಲಿ ನಮ್ಮ ಬ್ಯಾಂಕಿನ ಎಟಿಎಂ ಟ್ರ್ಯಾಂಸ್ಯಾಕ್ಷನ್ ಅಕೌಂಟ್ ನಂ. 98549133971 ಅನ್ನು ಎಟಿಎಂ ರಿ ಕನ್ಸಿಡರೇಶನ್ ನೆಟವರ್ಕ್ ಟೀಂ-1 ರವರು ಚೆಕ್ ಮಾಡಿದಾಗ ಯಾವುದೇ ವ್ಯವಹಾರ ನಡೆಯದೇ ದಿ. 1-1-2011 ರಂದು 40 ಲಕ್ಷ ರೂ ಡೆಬಿಟ್ ಆಗಿರುವುದು ಕಂಡು ಬಂದಿರುತ್ತದೆ ಎಂದರೆ ಸರಿ. ನಂತರ ಸದರಿ ತಂಡವು ಆಶ್ಚರ್ಯಗೊಂಡು ಬ್ರಾಂಚ್ ಕಂಟ್ರೋಲ್‌ಗೆ ವಿಷಯ ತಿಳಿಸಿರುತ್ತಾರೆ ಎಂದರೆ ಸರಿ. ನಂತರ ಬ್ರಾಂಚ್ ಕಂಟ್ರೋಲ್ ರವರು ಬ್ರ್ಯಾಚ್‌ಗೆ ಬಂದು ಚೆಕ್ ಮಾಡಿದಾಗ ಅವ್ಯವಹಾರ ಆಗಿರುವುದು ಕಂಡು ಬಂತು ಎಂದರೆ ಸರಿ. ನಂತರ ಬ್ರಾಂಚ್ ಕಂಟ್ರೋಲರ್ ನಮ್ಮ ಬ್ರ್ಯಾಚ್‌ನ ಎಲ್ಲಾ ಅಕೌಂಟ್‌ಗಳನ್ನು ಚೆಕ್ ಮಾಡಿದಾಗ ಕೆಲವು ಎಂಟ್ರಿಗಳು ತಪ್ಪಾಗಿ ನಮೂದಿಸಿರುವುದು ಕಂಡು ಬಂದಿರುತ್ತದೆ ಎಂದರೆ ಸರಿ. ನಂತರ ತನಿಖೆ ಕಾಲದಲ್ಲಿ ಪ್ರಶ್ನಿತ ಹಣದಿಂದ ಖರೀದಿ ಮಾಡಿದ್ದ ಫ್ಲಾಟ್ ಅನ್ನು ಮಾರಾಟ

ಮಾಡಿ 25 ಲಕ್ಷ ಹಣವನ್ನು ಬ್ಯಾಂಕಿಗೆ ಕಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ 25 ಲಕ್ಷ ಹಣ ಕಟ್ಟಿದ್ದು ಸರಿ ಆದರೆ ಪ್ಲಾಟ್ ಮಾರಿ ತಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ತಗೆದುಕೊಂಡಿದ್ದ 90,89,525 ಹಣವನ್ನು ಬಡ್ಡಿ ಸಮೇತ ಬ್ಯಾಂಕಿಗೆ ಕಟ್ಟಬೇಕಾಗಿತ್ತು ಎಂದರೆ ಸರಿ. ರ-ಃ ವಿಷಯಕ್ಕೆ ಸಂಬಂಧಿಸಿ ಪ್ರಾಸಾ-1 ರವರು ದೂರು ನೀಡಿದ್ದರು ಎಂದರೆ ಸರಿ. ದೂರು ಕೊಟ್ಟ ನಂತರ ಪೊಲೀಸರು ತನಿಖೆಗೆ ಬಂದಾಗ ನನ್ನ ಬಳಿ ಸಹ ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದಿದ್ದರು ಸಹ ಆರೋಪಿ ನಮ್ಮ ಸಹೋದ್ಯೋಗಿಯಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2011 ತನಿಖೆಯಾಗಿದ್ದರಿಂದ ವಿಚಾರಣೆ ಮಾಡಿದ ಬಗ್ಗೆ ನನಗೆ ಈಗ ನೆನಪಿಲ್ಲ. ಹೇಳಿಕೆಯನ್ನು ನಿಪಿ-2.

ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಃ ಸಮಯ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಈ ದಿನಾಂಕಃ 16.11.2021 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ.ಆರ್ ವಕೀಲರಿಂದ ಆರೋಪಿ ಪರವಾಗಿಃ

1. ನಿಮಗೆ ಸಾಕ್ಷಿ ನುಡಿಯಲು ಪೊಲೀಸರಿಂದ ಸಮನ್ಸ್ ಬಂದಿತ್ತಾ ಎಂದರೆ ಹೌದು. ಪೊಲೀಸರು ದಿನಚರಿಯಲ್ಲಿ ಸಹಿ ಪಡೆದರಾ ಎಂದರೆ ನನಗೆ ಈಗ ಕಸ್ತೂರಿನಗರ ಬ್ರಾಂಚ್‌ಗೆ ಟ್ರಾನ್ಸ್‌ಫರ್ ಆಗಿದೆ ನನಗೆ ಸಮನ್ಸ್‌ನ್ನು ಬಂದು ಕೊಟ್ಟು ಸಹಿ ಪಡೆದು ಹೋಗಿದ್ದಾರೆ.

2. ನಿಮಗೆ ಈ ಪ್ರಕರಣದಲ್ಲಿ ನಿಮ್ಮ ಹೇಳಿಕೆ ಪಡೆದುಕೊಳ್ಳುವ ಮೊದಲಿಗೆ ಪೊಲೀಸರು ನಿಮಗೆ ಸಮನ್ಸ್ ಕೊಟ್ಟಿದ್ದರಾ ಎಂದರೆ ಅದು 2011 ರಲ್ಲಿ ಆಗಿದ್ದು ನನಗೆ ಈಗ ಪೊಲೀಸರು ಸಮನ್ಸ್ ಕೊಟ್ಟ ಬಗ್ಗೆ ನೆನಪು ಇಲ್ಲ. ಪೊಲೀಸರು ತಮ್ಮ ಡೈರಿಯಲ್ಲಿ ನಿಮ್ಮ ಹೇಳಿಕೆ ಪಡೆದುದ್ದಕ್ಕೆ ನಿಮ್ಮ ಸಹಿ ಪಡೆದಿದ್ದಾರಾ ಎಂದರೆ ನಾನು ಸಹಿ ಮಾಡಿಲ್ಲ. ನಮಗೆ ಪೊಲೀಸರು ಬಂದು ಎನ್‌ಕ್ವೈರಿ ಮಾಡಿಲ್ಲ. ನಮಗೆ ರೀಜನಲ್ ಆಫೀಸಿನಿಂದ ಎನ್‌ಕ್ವೈರಿ ಮಾಡಿದ್ದರು. ನನಗೆ ಈ ಪ್ರಕರಣದಲ್ಲಿ ಸಮನ್ಸ್ ಬಂದ ನಂತರವೇ ನನಗೆ ಗೊತ್ತಾಗಿದ್ದು. ನಾನು ಈ ಪ್ರಕರಣದಲ್ಲಿ ಯಾರಿಗೂ ನನ್ನ ಹೇಳಿಕೆಯನ್ನು ನೀಡಿಲ್ಲ. ನೀವು ಸಾಕ್ಷಿ ಹೇಳಿಕೆಗೆ ಸಂಬಂಧಪಟ್ಟಂತೆ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿದ್ದೀರಾ ಎಂದರೆ ನಾನು ಯಾವುದರಲ್ಲೂ ಸಹಿ ಮಾಡಿಲ್ಲ.

3. ನೀವು ಬ್ಯಾಂಕಿನಲ್ಲಿ ಏನೆಂದು ಕೆಲಸ ಮಾಡುತ್ತಿದ್ದಿರಿ ಎಂದರೆ ನಾನು ಆಗ ಸೀನಿಯರ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದೆ. ನೀವು ಪ್ರತಿದಿನದ ಡೇ ಬುಕ್‌ನ್ನು ವೆರಿಫೈ ಮಾಡಿ ವರದಿ ಸಲ್ಲಿಸುತ್ತಿದ್ದಿರಿ ಎಂದರೆ ನಮಗೆ

ಮ್ಯಾನೇಜರ್‌ರವರು ಯಾವ ಡೇ ಬುಕ್ ಅಲ್ಲಾಟ್ ಮಾಡುತ್ತಾರೋ ಅದನ್ನು ನಾವು ವೆರಿಫೈ ಮಾಡಿ ವರದಿ ಸಲ್ಲಿಸುತ್ತಿದ್ದೆವು. ನಮಗೆ ಬಿಜಿಎಲ್ (ಬ್ಯಾಂಕಿಂಗ್ ಜನರಲ್ ಲೆಡ್ಜರ್) ಬುಕ್ ಸೀನಿಯರ್ ಅಸಿಸ್ಟೆಂಟ್‌ಗೆ ವೆರಿಫೈ ಮಾಡಲು ಬರುತ್ತಿರಲಿಲ್ಲ. ಸಾಕ್ಷಿ ಮುಂದುವರೆದು ಆ ಬ್ರಾಂಚ್‌ನಲ್ಲಿ ಬ್ರಾಂಚ್ ಮ್ಯಾನೇಜರ್ ಮತ್ತು ಕ್ಯಾಶ್ ಆಫೀಸರ್ ಇದ್ದುದರಿಂದ ಅವರು ಮಾತ್ರ ಬಿಜಿಎಲ್‌ನ್ನು ವೆರಿಫೈ ಮಾಡುತ್ತಿದ್ದರು.

4. ದಿಃ 01.01.2011 ರಂದು ಬ್ಯಾಂಕಿನಲ್ಲಿ ಆದ ಎಲ್ಲಾ ಟ್ರಾನ್ಸ್‌ಕ್ಷನ್ಸ್ ಬುಕ್ ನಿಮ್ಮ ಹತ್ತಿರ ಇತ್ತು ಎಂದರೆ ಎಲ್ಲವೂ ಕಂಪ್ಯೂಟರೈಸ್ಡ್ ಆಗಿದ್ದರಿಂದ ಎಲ್ಲವೂ ಆನ್‌ಲೈನ್‌ನಲ್ಲಿಯೇ ಎಂಟ್ರಿ ಆಗುತ್ತಿತ್ತು. ಬ್ಯಾಂಕಿನ ಪಾಸ್‌ವರ್ಡ್‌ಗಳನ್ನು ನೀವೇ ಉಪಯೋಗ ಮಾಡುತ್ತಿದ್ದಿರಿ ಎಂದರೆ ನಾನು ಬ್ಯಾಂಕಿನ ಪಾಸ್‌ವರ್ಡ್‌ಗಳನ್ನು ಯಾರಿಗೂ ಶೇರ್ ಮಾಡಿಲ್ಲ ಮತ್ತು ಯಾರಿಗೂ ನೀಡಿರಲಿಲ್ಲ. ಬ್ಯಾಂಕ್ ಮ್ಯಾನೇಜರ್ ಆರೋಪಿಯು ನಿಮ್ಮ ಹತ್ತಿರ ಬರುತ್ತಿರಲಿಲ್ಲ ಎಂದರೆ ಪಾಸ್‌ವರ್ಡ್ ಶೇರ್ ಆಗಿದ್ದು ಬೇರೆ ಮೇಡಮ್‌ರವರಿಂದ ಮತ್ತು ಮ್ಯಾನೇಜರ್ ಆದ ದತ್ತಾತ್ರೇಯರವರೇ ಪಾಸ್‌ವರ್ಡ್‌ಗಳನ್ನು ಕೇಳುತ್ತಿದ್ದರು. ಆರೋಪಿ ದತ್ತಾತ್ರೇಯರವರು ಯಾವುದೇ ಪಾಸ್‌ವರ್ಡ್ ಕೇಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಪಾಸ್‌ವರ್ಡ್ ಕೇಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

5. ನೀವು ಬ್ಯಾಂಕಿನಲ್ಲಿ ಡೆಬಿಟ್ ಸರಿಪಡಿಸುವುದು ಮತ್ತು ಅದರ ಸ್ಟೇಟ್‌ಮೆಂಟ್ ರೆಡಿ ಮಾಡಿ ಕ್ರೆಡಿಟ್ ಮಾಡಿಕೊಂಡು ಅದನ್ನು ಡಿವಿಷನಲ್ ಆಫೀಸ್‌ಗೆ ಕಳುಹಿಸುತ್ತಿದ್ದಿರಿ ಎಂದರೆ ನಿಮ್ಮ ಪ್ರಶ್ನೆ ಪ್ರಕಾರ ನಾವು ಡೆಬಿಟ್ ಮಾಡಬೇಕಾದರೆ ಬಿಜಿಎಲ್ ಡೆಬಿಟ್ ವೌಚರ್ ಹಾಕಿ ಮ್ಯಾನೇಜರ್‌ರವರ ಸಹಿ ಪಡೆದು ಅದನ್ನು ಅವರಿಗೆ ಪೋಸ್ಟ್ ಮಾಡಿ ಅವರು ಆಥೋರೈಸ್ ಮಾಡಿದ ನಂತರ ಮಾತ್ರ ಡೆಬಿಟ್ ಮಾಡಲು ಬರುತ್ತಿತ್ತು. ಹಾಗಾಗಿ ನಾನು ಯಾವುದೇ ಡೆಬಿಟ್ ಮಾಡಿಲ್ಲ.

ಈ ಹಂತದಲ್ಲಿ ಬೆಳಗಿನ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲುಃ ಶ್ರೀ ಎಂ.ಆರ್ ವಕೀಲರಿಂದ ಆರೋಪಿ ಪರವಾಗಿಃ

6. ನಿಮ್ಮ ಮುಖ್ಯವಿಚಾರಣೆಯಲ್ಲಿ ಹೇಳಿದ ಹಾಗೆ ಹಣವನ್ನು ಡೆಬಿಟ್ ಮಾಡಿ ಯಾರ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದು ನೀವು ನೋಡಿದ್ದೀರಾ ಎಂದರೆ ನಾನು ಹಣವನ್ನು ಡೆಬಿಟ್ ಮಾಡಿ ಯಾರ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದು ಖುದ್ದಾಗಿ ನೋಡಿಲ್ಲ. ನೀವು ಹೇಳಿದ ಹಾಗೆ ರೂ.40 ಲಕ್ಷ ಡೆಬಿಟ್ ಮಾಡಿ ಬೇರೆ ಖಾತೆಗೆ ವರ್ಗಾಯಿಸಿರುವ ಬಗ್ಗೆ ವಿತ್‌ಡ್ರಾ ಮಾಡಿದ ಬಗ್ಗೆ ವೌಚರ್ ಮತ್ತು ಇತರ ದಾಖಲಾತಿಗಳನ್ನು ನೀವು ನೋಡಿದ್ದೀರಾ ಎಂದರೆ ನಮಗೆ ಎಜಿಎಂ ಡಿಪಾರ್ಟ್‌ಮೆಂಟ್ ಮತ್ತು ಆರ್‌ಬಿಓ ಡಿಪಾರ್ಟ್‌ಮೆಂಟ್‌ನಿಂದ ಬಂದ ನಂತರ ಫ್ರಾಡ್ ಆಗಿದೆ ಎಂದು ಗೊತ್ತಾಯಿತು. ನೀವು ಹೇಳುವ ಹಾಗೆ ಎಜಿಎಂ ಡಿಪಾರ್ಟ್‌ಮೆಂಟ್ ಮತ್ತು ಆರ್‌ಬಿಓ ಡಿಪಾರ್ಟ್‌ಮೆಂಟ್‌ನಿಂದ ಯಾರೂ ಬಂದಿಲ್ಲ ಎಂದರೆ ಸರಿಯಲ್ಲ. ನೀವು ಅವರು ಬಂದಿರುವ ಬಗ್ಗೆ ವಿಸಿಟಿಂಗ್ ಬುಕ್ ಮತ್ತು ದಾಖಲಾತಿಯನ್ನು ನೋಡಿದ್ದೀರಾ ಎಂದರೆ ವಿಸಿಟಿಂಗ್ ಬುಕ್ ಬ್ರಾಂಚ್ ಮ್ಯಾನೇಜರ್ ಹತ್ತಿರ ಇರುತ್ತದೆ. ನೀವು, ರಾಮಲಿಂಗಂ, ಕಲಾವತಿ ಹಾಗೂ ಇತರರು ಸೇರಿಕೊಂಡು ಆರೋಪಿಯು ನಿವೃತ್ತ ಹೊಂದುತ್ತಿದ್ದಾನೆ ಎಂದು ಬ್ಯಾಂಕಿನಲ್ಲಿ ನೀವೇ ಸೈಬರ್ ವೇರಿಯೇಷನ್ ಮಾಡಿ ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ಹೇಳುವ ಹಾಗೆ ಆರೋಪಿಯು ಯಾವುದೇ ಸೈಟನ್ನು ಕ್ರಯ ಮಾಡಿಲ್ಲ ಎಂದರೆ ಅವರ

ವೈಯಕ್ತಿಕ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯು ಕೆಲಸ ಮಾಡುವಾಗ ಆಡಿಟ್ ರಿಪೋರ್ಟ್ ಸರಿಯಾಗಿ ಬಂದಿದೆ ಎಂದರೆ ನಾನು ಬ್ಯಾಂಕಿನಲ್ಲಿ ಕೆಲಸ ಮಾಡುವಾಗ ಬೇರೆಯವರು ಬಂದು ನಮ್ಮ ಬ್ಯಾಂಕಿನಲ್ಲಿ ಆಡಿಟ್ ಮಾಡಿಲ್ಲ. ಈ ಪ್ರಕರಣದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯವಿಚಾರಣೆಯಲ್ಲಿ ರೂ.1,30,00,000/- ಎಂದು ಹೇಳಿದ್ದೀರಿ ಮತ್ತು ಚಾರ್ಜ್‌ಶೀಟ್‌ನಲ್ಲಿ ರೂ.90,89,525/- ಇದೆ ಎಂದರೆ ಚಾರ್ಜ್‌ಶೀಟ್‌ನಲ್ಲಿ ರೂ.90 ಲಕ್ಷ ಮತ್ತು ನಂತರ ರೂ.40 ಲಕ್ಷ ಸಹ ಇದೆ ಒಟ್ಟು ಆರೋಪಿಯು ರೂ.1,30,00,000/- ಫ್ರಾಡ್ ಮಾಡಿದ್ದಾರೆ. ನೀವು ಹೇಳುವ ಹಾಗೆ ಆರೋಪಿಯು ಯಾವುದೇ ಅಪರಾಧ ಮಾಡದೇ ಇದ್ದರೂ ಸಹ ನಿಮ್ಮ ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ನಾನು ಕೇಳಿ ತಿಳಿದ ಪ್ರಕಾರ ಆರೋಪಿಯೇ ಅಪರಾಧ ಮಾಡಿದ್ದಾರೆ. ನೀವು ಮೇಲಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ಕೊಟ್ಟಿಲ್ಲ.

ಮರುವಿಚಾರಣೆ : ಹಿ.ಸ.ಸ.ಅ ರವರು ಇಲ್ಲ ಎಂದು ನುಡಿಯುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ 'ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು